
# 13. ಹಸುರು

**– ಕುವೆಂಪು**

ಪ್ರಕೃತಿಗೆ ವಿಸ್ಮಯಗಳಿಗೆ ಮನಸೋಲದ ವ್ಯಕ್ತಿತ್ವವೇ ಇಲ್ಲ. ಕುವೆಂಪುರವರಿಗೆ ಪ್ರಕೃತಿಯೇ ದೇವರು. ಪ್ರಕೃತಿಯಲ್ಲಿ ಅದ್ವೈತವನ್ನು ಕಂಡವರು. ಅವರು ಇದ್ದ ಮಲೆನಾಡಿನ ವಾತಾವರಣವೇ ಅವರನ್ನು ಪ್ರಕೃತಿ ಕವಿಯನ್ನಾಗಿಸಿದೆ. ಪ್ರಕೃತಿಯೊಳಗಿನ ತನ್ಮಯತೆ ಅವರ ಪ್ರಕೃತಿ ಆರಾಧನೆಯನ್ನು ಪ್ರತಿಬಿಂಬಿಸುತ್ತದೆ. ಸಕಲ ಜೀವರಾಶಿಗಳಿಗೆ ಪ್ರಕೃತಿ ಎಷ್ಟು ಅವಶ್ಯವೆಂಬುದು ಎಲ್ಲರಿಗೂ ಗೊತ್ತಿದೆ. ಅಂತಹ ಪ್ರಕೃತಿಯಲ್ಲಿನ ಚರಚರಾ ವಸ್ತುಗಳನ್ನು ಇಟ್ಟುಕೊಂಡು ವರ್ಣಿಸುವುದು ಪ್ರಕೃತಿ ಗೀತೆಗಳಾಗಿವೆ. ಗೋವಿಂದ ಪೈ, ದ.ರಾ.ಬೇಂದ್ರೆ, ಕಾರಾಂತರು, ತೇಜಸ್ವಿ ಮುಂತಾದವರು ಸಾಕಷ್ಟು ಪ್ರಕೃತಿಗೆ ಸಂಬಂಧಿಸಿದ ಗೀತೆಗಳನ್ನು ಬರೆದಿದ್ದಾರೆ. ಅಂತಹ ಪ್ರಕೃತಿ ಗೀತೆಗಳಲ್ಲಿ ಕುವೆಂಪುರವರ ಹಸುರು ಕವನವೂ ಕೂಡ ಒಂದಾಗಿದೆ.

## ಕವಿ – ಕಾವ್ಯ ಪರಿಚಯ



ಕುವೆಂಪು

**ಕುವೆಂಪು** ಕಾವ್ಯನಾಮದಿಂದ ಪ್ರಸಿದ್ಧರಾದ ಕುಪ್ಪಳಿ ವೆಂಕಟಪ್ಪ ಪುಟ್ಟಪ್ಪ ಅವರು **ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ಸಮೀಪದ ಕುಪ್ಪಳ್ಳಿ**ಯಲ್ಲಿ ಕ್ರಿ.ಶ. **1904** ರಲ್ಲಿ ಜನಿಸಿದರು.

ಇವರು **ಕೊಳಲು, ಪಾಂಚಜನ್ಯ, ಪ್ರೇಮಕಾಶ್ಮೀರ, ಪಕ್ಷಿಕಾಶಿ, ಶ್ರೀರಾಮಾಯಣ ದರ್ಶನಂ, ಕಾನೂರು ಹೆಗ್ಗಡತಿ, ಮಲೆಗಳಲ್ಲಿ ಮದುಮಗಳು, ತಪೋನಂದನ, ರಸೋವೈಸ:, ಅಮಲನ ಕಥೆ, ಮೋಡಣ್ಣನ ತಮ್ಮ, ಬೊಮ್ಮನಹಳ್ಳಿಯ ಕಿಂದರಿಜೋಗಿ, ಜಲಗಾರ, ಯಮನ ಸೋಲು, ಬೆರಳ್ಗೆ ಕೊರಳ್, ನೆನಪಿನ ದೋಣಿಯಲ್ಲಿ** (ಆತ್ಮಕಥನ) ಮುಂತಾದ ಕೃತಿಗಳನ್ನು ಬರೆದಿದ್ದಾರೆ.


ಇವರಿಗೆ **'ಶ್ರೀರಾಮಾಯಣ ದರ್ಶನಂ'** ಮಹಾಕಾವ್ಯಕ್ಕೆ **'ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ'** ಮತ್ತು 1968ರಲ್ಲಿ **'ಭಾರತೀಯ ಜ್ಞಾನಪೀಠ ಪ್ರಶಸ್ತಿ'** , 1988ರಲ್ಲಿ **'ಪಂಪ ಪ್ರಶಸ್ತಿ'**, 1992ರಲ್ಲಿ **'ಕರ್ನಾಟಕ ರತ್ನ ಪ್ರಶಸ್ತಿ'** ಲಭಿಸಿವೆ. 1964ರಲ್ಲಿ **ರಾಷ್ಟ್ರಕವಿ** ಬಿರುದಿಗೆ ಪಾತ್ರರಾಗಿದ್ದಾರೆ.

## ಪದ್ಯದ ಆಶಯ ಭಾವ

ಕುವೆಂಪುರವರಿಗೆ ಪ್ರಕೃತಿಯೆಂದರೆ ಸಾಕ್ಷಾತ್ ದೇವರು. ಸದಾ ಒಂದಿಲ್ಲೊಂದು ಕವನಗಳಲ್ಲಿ ಪ್ರಕೃತಿಯ ರಮ್ಯತೆಯನ್ನು ಹೊಗಳಿದ್ದಾರೆ. ಅಂತಹ ಕವನಗಲ್ಲೊಂದಾದ 'ಹಸುರು' ಕವನವು ಆಶ್ವಯುಜ ಮಾಸದ ನವರಾತ್ರಿಯಲ್ಲಿ ಪ್ರಕೃತಿಯಲ್ಲಿ ಹೆಪ್ಪುಗಟ್ಟಿದ ಹಚ್ಚ ಹಸುರನ್ನು ಕಂಡು ಪ್ರೇರಿತವಾದ ಕವನವಾಗಿದೆ. ಇದು ಕುವೆಂಪು ಅವರ ವಾಸಸ್ಥಳವಾದ ಮಲೆನಾಡಿನ ಕುಪ್ಪಳ್ಳಿಯ 'ಕವಿಶೈಲ'ದಲ್ಲಿ ಅವರಿಗುಂಟಾದ ಸೌಂದರ್ಯಾನುಭವ. ಪ್ರಕೃತಿ, ಅಲ್ಲಿಯ ಹಸುರುಗಳೊಂದಿಗೆ ಕುವೆಂಪು ಹೊಂದಿದ್ದ ಸಮೀಪ ಸಂಬಂಧವನ್ನು ತೋರಿಸುತ್ತದೆ.

ಸಸ್ಯ ಸಮೃದ್ಧಿಯ ಹಸುರೇ ಆಗಸ, ಮುಗಿಲು, ಗದ್ದೆ, ಬಯಲು, ಸಂಜೆ, ಹೂಗಂಪು, ಹಕ್ಕಿಯ ಧನಿ, ಕಡಲಿನವರೆಗೂ ವ್ಯಾಪಿಸುವ ಮಟ್ಟಿಗೆ ಕವಿ ಹಸುರಿನಲ್ಲಿ ತಲ್ಲೀನರಾಗಿರುವುದನ್ನು ಈ ಕವನದ ಮುಖಾಂತರ ಗುರುತಿಸಬಹುದಾಗಿದೆ. ಕವಿಪ್ರಜ್ಞೆಗೆ 'ಪ್ರಕೃತಿ ಒಲುಮೆಯೇ ಮುಕ್ತಿಯಾನಂದ ಸಾಧನೆಯಾಗುತ್ತದೆ'. ಕುವೆಂಪು ಅವರ ಈ ಚಿಂತನೆಗೆ ಅನುಗುಣವಾಗಿವೆ. ಈ ಕವಿತೆಯು ಕುವೆಂಪು ಅವರ 'ಪ್ರಕೃತಿ ತನ್ಮಯತೆಗೂ', 'ಕವಿ ಮತ್ತು ಪ್ರಕೃತಿ ಒಂದಾಗುವ ಅವರ ಕಾವ್ಯದ ಅದ್ವೈತ ಸ್ಥಿತಿಗೂ' ಸಮರ್ಥ ನಿದರ್ಶನವಾಗಿದೆ. ಪ್ರಸ್ತುತ ಪದ್ಯಭಾಗವನ್ನು ಕುವೆಂಪು ಅವರ 'ಪಕ್ಷಿಕಾಶಿ' ಕವನ ಸಂಕಲನದಿಂದ ಆಯ್ದುಕೊಳ್ಳಲಾಗಿದೆ.

## ಪದ್ಯದ ಸಾರಾಂಶ ವಿವರಣೆ




**ನವರಾತ್ರಿಯ ನವಧಾತ್ರಿಯ**
**ಈ ಶ್ಯಾಮಲ ವನಧಿಯಲಿ**
**ಹಸುರಾದುದೊ ಕವಿಯಾತ್ಮಂ**
**ರಸಪಾನ ಸ್ನಾನದಲಿ!**



ಅಶ್ವಯುಜ ಮಾಸದ ನವರಾತ್ರಿಯ ದಿನದಲ್ಲಿ ಹೊಸ ಭೂಮಿಯ ಹಾಗೇ ಕಾಣುವ ನೀಲವರ್ಣದ ಸಮುದ್ರದಂತಿರುವ ಈ ವನದ ಹಸುರಿನಲ್ಲಿ ಕವಿಯ ಆತ್ಮವೂ ಕೂಡ ಹಸುರಾಗಿ ರಸಪಾನ ಸ್ಥಾನದಲ್ಲಿ ಮಿಂದು ಹೋಗಿದೆ.



**ಹಸುರಾಗಸ; ಹಸುರು ಮುಗಿಲು;**
**ಹಸುರು ಗದ್ದೆಯಾ ಬಯಲು;**
**ಹಸುರಿನ ಮಲೆ; ಹಸುರು ಕಣಿವೆ;**
**ಹಸುರು ಸಂಜೆಯೀ ಬಿಸಿಲೂ!**



ಹಸುರಾಗಿರುವ ಆಕಾಶ, ಹಸುರಿನ ಮುಗಿಲು, ಹಚ್ಚಹಸುರು ಗದ್ದೆಯ ಬಯಲು, ಹಸುರಿನಿಂದ ಕಂಗೊಳಿಸುವ ಬೆಟ್ಟಗಳು, ಹಸುರಾಗಿರುವ ಕಣಿವೆಗಳು, ಸಂಜೆಯ ಬಿಸಿಲೂ ಕೂಡ ಹಸುರಾಗಿ ಕಂಗೊಳಿಸುತಿದೆ.



**ಅಶ್ವೀಜದ ಶಾಲಿವನದ**
**ಗಿಳಿಯೆದೆ ಬಣ್ಣದ ನೋಟ;**
**ಅದರೆಡೆಯಲಿ ಬನದಂಚಲಿ**
**ಕೊನೆವೆತ್ತಡಕೆಯ ತೋಟ!**



ಅಶ್ವಯುಜ ಮಾಸದ ಆ ದಿನ ಭತ್ತದ ಗದ್ದೆಗಳು ನೋಟಕ್ಕೆ ಗಿಳಿಯ ಹಸುರು ಬಣ್ಣದಂತೆ ಕಾಣುತ್ತಿವೆ. ಅದರ ಪಕ್ಕಯಲ್ಲಿ ಬನದ (ಕಾಡಿನ) ಅಂಚಿನಲ್ಲಿ (ತುದಿಯಲ್ಲಿ) ಗೊನೆಯನ್ನು ಹೊತ್ತು ನಿಂತಿರುವ ಅಡಕೆಯ ತೋಟ ಇದೆ.



**ಅದೊ ಹುಲ್ಲಿನ ಮಕಮಲ್ಲಿನ**
**ಪೊಸಪಚ್ಚೆಯ ಜಮಖಾನೆ**
**ಪಸರಿಸಿ ತಿರೆ ಮೈ ಮುಚ್ಚಿರೆ**
**ಬೇರೆ ಬಣ್ಣವನೆ ಕಾಣೆ!**



ಅದೋ ನಯವಾದ ಬಟ್ಟೆಯಂತಿರುವ ಹುಲ್ಲಿನ ಹಾಸು(ಹೊದಿಕೆ) ಎಳೆಯ ಚಿಗುರಿನ ಹೊಸ ಹಸುರಿನ ಜಮಖಾನೆಯಾಗಿ ಹರಡಿ ಭೂಮಿಯ ಮೈಯನ್ನು ಮುಚ್ಚಿರುವವಾಗ ಹಸುರನ್ನು ಬಿಟ್ಟು ಬೇರೆ ಬಣ್ಣವನ್ನು ಕಾಣಲಾರೆ.



**ಹೊಸ ಹೂವಿನ ಕಂಪು ಹಸುರು,**
**ಎಲರಿನ ತಂಪೂ ಹಸುರು!**
**ಹಕ್ಕಿಯ ಕೊರಲಿಂಪು ಹಸುರು!**
**ಹಸುರು ಹಸುರಿಳೆಯುಸಿರೂ!**



ಹೊಸ ಹೂವಿನ ಕಂಪು(ಸುವಾಸನೆ) ಹಸುರಾಗಿದೆ.ಬೀಸುವ ಗಾಳಿಯ ತಂಪು ಹಸುರಾಗಿದೆ. ಹಕ್ಕಿಯ ಕೊರಳಿನ ಧ್ವನಿ ಹಸುರಾಗಿದೆ. ಹಸುರಾಗಿರುವ ಭೂಮಿಯ ಉಸಿರೋ ಹಸಿರಾಗಿದೆ.

**ಹಸುರತ್ತಲ್ ! ಹಸುರಿತ್ತಲ್ !**
**ಹಸುರೆತ್ತಲ್ ಕಡಲಿನಲಿ**
**ಹಸುರ್ಗಟ್ಟಿತೊ ಕವಿಯಾತ್ಮಂ**
**ಹಸುರ್ ನೆತ್ತರ್ ಒಡಲಿನಲಿ !**



ಆ ಕಡೆ ನೋಡಿದರೂ ಹಸುರು ಈ ಕಡೆ ನೋಡಿದರೂ ಹಸುರು ಎತ್ತೆತ್ತಲೂ ನೋಡಿದರೂ ಹಸುರು, ಕಡಲೂ ಹಸುರಾಗಿದೆ. ಕವಿಯ ಆತ್ಮವೂ (ದೇಹ, ಮನಸ್ಸು ಸೇರಿದೆ) ಹಸುರುಗಟ್ಟಿಬಿಟ್ಟಿದೆ. ಒಡಲೊಳಗಿನ ರಕ್ತವೂ ಹಸುರಾಗಿದೆ.

ಕುವೆಂಪುರವರು ಇಡಿ ಪ್ರಕೃತಿಯ ಜೊತೆಗೆ ತಮ್ಮ ಆತ್ಮವನ್ನು ಹಸುರಾಗಿಸಿಕೊಂಡು ರಸಪಾಕದಲ್ಲಿ ಮಿಂದಿದ್ದಾರೆ. ಪ್ರಕೃತಿಯೊಂದಿಗಿನ ಅದ್ವೈತ ಸ್ಥಿತಿಯನ್ನು ಎತ್ತಿತೋರಿಸಿದೆ.

## ಅಭ್ಯಾಸ ಪ್ರಶ್ನೋತ್ತರಗಳು

### ಅ) ಕೊಟ್ಟಿರುವ ಪ್ರಶ್ನೆಗಳಿಗೆ ಒಂದೊಂದು ವಾಕ್ಯಗಳಲ್ಲಿ ಉತ್ತರಿಸಿ.

**1. ಆಶ್ವಯುಜದ ಭತ್ತದ ಗದ್ದೆಯ ಬಣ್ಣ ಯಾವ ಹಸುರಿನಂತಿದೆ?**

**ಉತ್ತರ:** ಅಶ್ವಯುಜದ ಭತ್ತದ ಗದ್ದೆಯ ಬಣ್ಣ ಗಿಳಿಯ ಹಸುರಿನಂತಿದೆ.

**1. ಕವಿಯು ನೋಡಿದ ಅಡಕೆಯ ತೋಟ ಎಲ್ಲಿದೆ?**

**ಉತ್ತರ:** ಕವಿಯು ನೋಡಿದ ಅಡಕೆಯ ತೋಟ ಬನದ ಅಂಚಿನಲ್ಲಿ ಇದೆ.

**2. 'ಹಸುರು' ಎಂಬುದು ಯಾವುದನ್ನು ಕಂಡು ಪ್ರೇರಿತವಾದ ಕವನವಾಗಿದೆ?**

**ಉತ್ತರ:** ಹಸುರು ಕವನವು ಆಶ್ವಯುಜ ಮಾಸದ ನವರಾತ್ರಿಯಲ್ಲಿ ಪ್ರಕೃತಿಯಲ್ಲಿ ಹೆಪ್ಪುಗಟ್ಟಿದ ಹಚ್ಚ ಹಸುರನ್ನು ಕಂಡು ಪ್ರೇರಿತವಾದ ಕವನವಾಗಿದೆ.

**3. ಕವಿಗೆ ಹುಲ್ಲಿನ ಹಾಸು ಯಾವ ರೀತಿ ಕಂಡಿದೆ?**

**ಉತ್ತರ:** ಕವಿಗೆ ಹುಲ್ಲಿನ ಹಾಸು ಮಕಮಲ್ಲಿನ ಪೊಸಪಚ್ಚೆಯ ಜಮಖಾನೆಯ ರೀತಿ ಕಂಡಿದೆ.

**4. ಕವಿಯ ಆತ್ಮ ಎಲ್ಲಿ ಎಲ್ಲಿ ಹಸುರಾಗಿದೆ?**

**ಉತ್ತರ:** ಕವಿಯ ಆತ್ಮ ಶ್ಯಾಮಲ ವನಧಿಯಲಿ ಹಸುರಾಗಿದೆ.

**5. ಕುವೆಂಪುರವರು ನೋಡಿದ ಸಂಜೆಯ ಬಿಸಿಲು ಯಾವ ಬಣ್ಣದ್ದಾಗಿತ್ತು ?**

**ಉತ್ತರ:** ಕುವೆಂಪುರವರು ನೋಡಿದ ಸಂಜೆಯ ಬಿಸಿಲು ಹಸಿರು ಬಣ್ಣದ್ದಾಗಿತ್ತು.

### ಆ) ಕೊಟ್ಟಿರುವ ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ.

**1. ಕವಿಗೆ ಯಾವ್ಯಾವುದರಲ್ಲಿ ಆಗಸದಿಂದ ಬಿಸಿಲವರೆಗೂ ಹಸುರು ಕಾಣುತ್ತಿದೆ?**

**ಉತ್ತರ:** ನವರಾತ್ರಿಯಲ್ಲಿ ಹಸುರಾದ ಕವಿಯ ಹೃದಯಕ್ಕೆ ಆಗಸವು ಹಸುರಾಗಿ ಕಾಣುತ್ತದೆ. ಆಗಸದಲ್ಲಿರುವ ಮುಗಿಲು ಹಸುರಾಗಿ ಕಾಣುತ್ತಿದೆ. ಗದ್ದೆಯ ಬಯಲೆಲ್ಲ ಹಸುರಾಗಿ ಗೋಚರಿಸಿದೆ. ಮಲೆ(ಬೆಟ್ಟ), ಕಣಿವೆಗಳೆಲ್ಲವು ಹಸುರಾಗಿವೆ. ಸಂಜೆಯ ಬಿಸಿಲು ಕೂಡ ಕವಿಗೆ ಹಸುರು ಕಾಣುತ್ತಿದೆ.

**2. ಹಸುರು ಸಕಲೇಂದ್ರಿಯಗಳನ್ನು ವ್ಯಾಪಿಸಿದೆ ಎಂಬುದನ್ನು ಕವಿಯು ಹೇಗೆ ವರ್ಣಿಸಿದ್ದಾರೆ?**

**ಉತ್ತರ:** ಎತ್ತ ನೋಡಿದರತ್ತಾ ಕಣ್ಣಿಗೆ ಹಚ್ಚಹಸುರು ಕಾಣಿಸಿದೆ. ಹೊಸ ಹೂವಿನ ಹಸುರಿನ ಕಂಪನ್ನು ಮೂಗು ಆಘ್ರಾಣಿಸಿದೆ. ಬೀಸುವ ತಂಪಾದ ಗಾಳಿಯ ಸ್ಪರ್ಶದಿಂದ ಚರ್ಮವೂ ಹಸುರಾಗಿದೆ. ಹಕ್ಕಿಯ ಕೊರಳಿಂದ ಬರುವ ಇಂಪಾದ ಧ್ವನಿ ಕಿವಿಗೆ ನೀಡುವ ಆನಂದದ ಹಸುರಾಗಿದೆ. ಇಳೆಯ ಉಸಿರು (ಗಾಳಿ) ದೇಹದ ಉಸಿರಿನಲ್ಲಿ ಬೆರೆತು ಹಸುರಾಗಿದೆ. ಹೀಗೆ ಹಸುರು ಸಕಲೇಂದ್ರಿಯಗಳನ್ನು ವ್ಯಾಪಿಸಿದೆ ಎಂದು ಕವಿಯು ವರ್ಣಿಸಿದ್ದಾರೆ.

**3. ಕವಿಯಾತ್ಮವು ಹಸುರುಗಟ್ಟಲು ಕಾರಣವಾದ ಹಿನ್ನೆಲೆಯ ಅಂಶಗಳೇನು?**

**ಉತ್ತರ:** ಆಶ್ವಯುಜ ಮಾಸದ ನವರಾತ್ರಿಯಲ್ಲಿ ಪ್ರಕೃತಿಯಲ್ಲಿ ಹೆಪ್ಪುಗಟ್ಟಿದ ಹಚ್ಚ ಹಸುರು, ಅತ್ತ ನೋಡಿದರೂ ಹಸುರು, ಇತ್ತ ನೋಡಿದರೂ ಹಸುರು, ಎತ್ತೆತ್ತ ನೋಡಿದರೂ ಹಚ್ಚ ಹಸುರು. ಆಗಸ, ಮುಗಿಲು, ಬಯಲು, ಬೆಟ್ಟ, ಕಣಿವೆ, ಬಿಸಿಲು, ಭತ್ತದ ಗದ್ದೆ, ಅಡಕೆಯ ತೋಟ, ಹೂವಿನ ಕಂಪು, ಗಾಳಿಯ ತಂಪು, ಹಕ್ಕಿಯ ದ್ವನಿ, ಇಳೆಯ ಗಾಳಿ, ಕಡಲು ಸರ್ವವು ಹಸುರಿನ ಭಾವ ಕವಿಯ ಮನದಲ್ಲಿ ಮೂಡಿದ್ದರಿಂದ ಒಡಲಿನಲ್ಲಿರುವ ನೆತ್ತರೂ ಹಸುರಾಗಿ ಕವಿಯಾತ್ಮವು ಹಸುರುಗಟ್ಟಲು ಕಾರಣವಾಯಿತು.

**4. ಕುವೆಂಪುರವರು ಪ್ರಕೃತಿಯ ಯಾವ ಯಾವ ಅಂಶಗಳಲ್ಲಿ ಹಸುರನ್ನು ಗುರುತಿಸಿದ್ದಾರೆ ?**

**ಉತ್ತರ:** ಕುವೆಂಪುರವರು ಆಗಸ, ಮುಗಿಲು, ಬಯಲು, ಬೆಟ್ಟ, ಕಣಿವೆ, ಬಿಸಿಲು, ಭತ್ತದ ಗದ್ದೆ, ಅಡಕೆಯ ತೋಟ, ಹೂವಿನ ಕಂಪು, ಗಾಳಿಯ ತಂಪು, ಹಕ್ಕಿಯ ಧ್ವನಿ, ಇಳೆಯ ಗಾಳಿ, ಕಡಲು ಹಾಗೂ ತಮ್ಮ ಒಡಲಿನ ರಕ್ತ ಮುಂತಾದ ಅಂಶಗಳಲ್ಲಿ ಹಸುರನ್ನು ಗುರುತಿಸಿದ್ದಾರೆ.

**ಇ) ಕೊಟ್ಟಿರುವ ಪ್ರಶ್ನೆಗಳಿಗೆ ಎಂಟು–ಹತ್ತು ವಾಕ್ಯಗಳಲ್ಲಿ ಉತ್ತರಿಸಿ.**

**1. 'ಹಸುರು' ಕವನದ ರೀತ್ಯ ಎಲ್ಲೆಲ್ಲಿ ಹಸುರು ವ್ಯಾಪಿಸಿದೆ ಎಂಬುದನ್ನು ವಿವರಿಸಿ.**

**ಉತ್ತರ:** ನೀಲವರ್ಣದ ಸಮುದ್ರದಂತಿರುವ ವನವೆಲ್ಲವೂ ಹಸುರಾಗಿದೆ. ಕವಿಯ ಆತ್ಮಕ್ಕೂ ಕೂಡ ಹಸುರು ಆವರಿಸಿದೆ. ನವರಾತ್ರಿಯಲ್ಲಿ ಹಸುರಾದ ಕವಿಯ ಹೃದಯಕ್ಕೆ ಆಗಸವು ಹಸುರಾಗಿ ಕಾಣುತ್ತದೆ. ಆಗಸದಲ್ಲಿರುವ ಮುಗಿಲು ಹಸುರಾಗಿ ಕಾಣುತ್ತಿದೆ. ಗದ್ದೆಯ ಬಯಲೆಲ್ಲ ಹಸುರಾಗಿ ಗೋಚರಿಸಿದೆ. ಮಲೆ(ಬೆಟ್ಟ), ಕಣಿವೆಗಳೆಲ್ಲವು ಹಸುರಾಗಿವೆ. ಸಂಜೆಯ ಬಿಸಿಲು ಕೂಡ ಕವಿಗೆ ಹಸುರು ಕಾಣುತ್ತಿದೆ. ಹೊಸ ಹೂವಿನ ಕಂಪಿಗೂ ಹಸುರಿನ ಆವರಿಸಿದೆ. ಬೀಸುವ ತಂಪಾದ ಗಾಳಿಗೂ ಹಸುರು ವ್ಯಾಪಿಸಿದೆ. ಹಕ್ಕಿಯ ಕೊರಳಿಂದ ಬರುವ ಇಂಪಾದ ಧ್ವನಿ ಹಸುರಾಗಿದೆ. ಇಳೆಯ ಉಸಿರು (ಗಾಳಿ) ಕವಿಯ ದೇಹದಲ್ಲೂ ಸಂಚರಿಸಿ ಅದಕ್ಕೂ ಕೂಡ ಹಸುರು ವ್ಯಾಪಿಸಿದೆ. ಕಡಲಿಗೂ ಹಸಿರು ವ್ಯಾಪಿಸಿದೆ. ಎತ್ತ ನೋಡಿದರತ್ತಾ ಕಣ್ಣಿಗೆ ಹಚ್ಚಹಸುರು ಕಾಣಿಸಿದೆ. ಸರ್ವವು ಹಸುರಿನ ಭಾವ ಕವಿಯ ಮನದಲ್ಲಿ ಮೂಡಿದ್ದರಿಂದ ಒಡಲಿನಲ್ಲಿರುವ ನೆತ್ತರೂ ಹಸುರಾಗಿ ಕವಿಯಾತ್ಮಕ್ಕೂ ಹಸುರು ವ್ಯಾಪಿಸಿದೆ ಎಂದು ವಿವರಿಸಬಹುದು.

**2. ಪ್ರಕೃತಿಯ 'ಹಸುರು' ಜೀವ ಜಗತ್ತಿಗೆ ಎಷ್ಟು ಮುಖ್ಯ ಎಂಬುದನ್ನು ಕುರಿತು ನಿಮ್ಮ ಅಭಿಪ್ರಾಯಗಳನ್ನು ಬರೆಯಿರಿ.**

**ಉತ್ತರ:** ಹಸುರು ಸಕಲ ಜೀವಿಗಳ ಉಸಿರು ಇದ್ದಂತೆ. ಹಸುರು ಪ್ರಕೃತಿಯ ಸಂಭ್ರಮವನ್ನು ತೋರಿಸುತ್ತದೆ. ಹಸುರು ಸಮೃದ್ಧಿಯ ಸಂಕೇತ. ಭೂಮಿ ಹಸುರಿನಿಂದ ಕಂಗೊಳಿಸುತ್ತಿದೆ ಎಂದರೆ ಭೂಮಿ ಸಮೃದ್ಧವಾಗಿದೆ ಎಂದೇ ಅರ್ಥ. ಕವಿ ಕುವೆಂಪುರವರು ಪ್ರಕೃತಿಯನ್ನು ನೋಡಿದ ಭಾವ ಹಸುರುಮಯವಾಗಿದೆ. ಪ್ರಕೃತಿಯ ಚರಚರ ವಸ್ತುಗಳು ಕೂಡ ಕವಿಯ ಆತ್ಮವನ್ನು ಹಸುರುಮಯವಾಗಿಸಿ ಇಡಿ ಪ್ರಕೃತಿಯ ಜೊತೆಗೆ ತಮ್ಮ ಆತ್ಮವನ್ನು ಹಸುರಾಗಿಸಿಕೊಂಡು ರಸಪಾಕದಲ್ಲಿ ಮಿಂದಿದ್ದಾರೆ. ಇದು ಪ್ರಕೃತಿಯೊಂದಿಗಿನ ಅದ್ವೈತ ಸ್ಥಿತಿಯನ್ನು ಎತ್ತಿತ್ತೋರಿಸಿದೆ. ಹಸುರಿನಿಂದ ಕೂಡಿದ ಮರಗಿಡ ಪೈರುಗಳು ಪ್ರಾಣಿ, ಪಕ್ಷಿ, ಮಾನವ ಮೊದಲಾದ ಜೀವಜಗತ್ತಿಗೆ ಆಹಾರ–ಆನಂದವನ್ನು ಉಂಟುಮಾಡುತ್ತದೆ. ಹಸುರಾದ ಮಲೆ, ಕಣಿವೆ, ತೋಟಗಳು, ಭತ್ತದ ಗದ್ದೆಗಳು, ಆಗಸಗಳು ಎಲ್ಲರ ಕಣ್ಣಿಗೆ, ಮನಸ್ಸಿಗೆ ಆಹ್ಲಾದವನ್ನು ತರುವುದರ ಜೊತೆಗೆ ಜೀವವನ್ನು ತುಂಬುತ್ತವೆ ಆದ್ದರಿಂದ ಹಸಿರು ಇಳೆಯ ಉಸಿರಾಗಿದೆ. ಜೀವಿಗಳ ಉಸಿರು ಇರಬೇಕಾದರೆ ಹಸುರು ಬಹಳ ಮುಖ್ಯ ಆದ್ದರಿಂದ ಭೂಮಿಯ ಮೇಲಿನ ಹಸುರನ್ನು ಕಾಪಾಡುವುದು ನಮ್ಮ ನಿಮ್ಮೆಲ್ಲರ ಕರ್ತವ್ಯ ಎಂದು ನನ್ನ ಅಭಿಪ್ರಾಯವಾಗಿದೆ.

**ಈ) ಸಂದರ್ಭಸಹಿತ ಸ್ವಾರಸ್ಯವನ್ನು ವಿವರಿಸಿ.**

**1. "ಹಸುರಾದುದು ಕವಿಯಾತ್ಮಂ"**

**ಆಯ್ಕೆ :** ಈ ವಾಕ್ಯವನ್ನು **ಕುವೆಂಪು** ಅವರ **'ಪಕ್ಷಿಕಾಶಿ'** ಕವನ ಸಂಕಲನದಿಂದ ಆಯ್ದ **'ಹಸುರು'** ಎಂಬ ಪದ್ಯದಿಂದ ಆರಿಸಲಾಗಿದೆ.

**ಸಂದರ್ಭ:** ಅಶ್ವಯುಜ ಮಾಸದ ನವರಾತ್ರಿಯ ದಿನದಲ್ಲಿ ಹೊಸ ಭೂಮಿಯ ಹಾಗೇ ಕಾಣುವ ನೀಲವರ್ಣದ ಸಮುದ್ರದಂತಿರುವ ಹಸುರಾಗಿರುವ ವನವನ್ನು ನೋಡಿ ಕವಿಯ ಆತ್ಮವೂ ಕೂಡ ಹಸುರಾಗಿ ರಸಪಾನ ಸ್ಥಾನದಲ್ಲಿ ಮಿಂದು ಹೋಗಿದೆ ಎಂದು ಕವಿ ಪ್ರಕೃತಿಯಲ್ಲಿ ವ್ಯಾಪಿಸಿರುವ ಹಸುರಿನ ಬಗ್ಗೆ ವರ್ಣಿಸುವ ಸಂದರ್ಭವಾಗಿದೆ.

**ಸ್ವಾರಸ್ಯ :** ಹಸುರಾಗಿರುವ ವನವನ್ನು ನೋಡಿದ ಕುವೆಂಪು ಅವರ ಆತ್ಮವೂ ಕೂಡ ಹಸುರಾದುದ್ದು ಪ್ರಕೃತಿಯೊಂದಿಗಿನ ಅದ್ವೈತ ಸ್ಥಿತಿಯನ್ನು ಎತ್ತಿತೋರಿಸಿರುವುದು ಸ್ವಾರಸ್ಯಪೂರ್ಣವಾಗಿ ಮೂಡಿಬಂದಿದೆ.

**2. "ಬೇರೆ ಬಣ್ಣವನೆ ಕಾಣೆ"**

**ಆಯ್ಕೆ:** ಈ ವಾಕ್ಯವನ್ನು **ಕುವೆಂಪು** ಅವರ **'ಪಕ್ಷಿಕಾಶಿ'** ಕವನ ಸಂಕಲನದಿಂದ ಆಯ್ದ **'ಹಸುರು'** ಎಂಬ ಪದ್ಯದಿಂದ ಆರಿಸಲಾಗಿದೆ.

**ಸಂದರ್ಭ:** ನಯವಾದ ಬಟ್ಟೆಯಂತಿರುವ ಹುಲ್ಲಿನ ಹಾಸು(ಹೊದಿಕೆ) ಎಳೆಯ ಚಿಗುರಿನ ಹೊಸ ಹಸುರಿನ ಜಮಖಾನೆಯಾಗಿ ಹರಡಿ ಭೂಮಿಯ ಮೈಯನ್ನು ಮುಚ್ಚಿರುವವಾಗ ಹಸುರನ್ನು ಬಿಟ್ಟು ಬೇರೆ ಬಣ್ಣವನ್ನು ಕಾಣಲಾರೆ ಎಂದು ಪ್ರಕೃತಿಯನ್ನು ವರ್ಣಿಸಿದ ಸಂದರ್ಭವಾಗಿದೆ.

**ಸ್ವಾರಸ್ಯ:** ಕವಿ ಕುವೆಂಪುರವರ ಕಣ್ಣಿಗೆ ಹಸುರು ಬಿಟ್ಟು ಬೇರೆ ಯಾವ ಬಣ್ಣವೂ ಕಾಣುತ್ತಿಲ್ಲ ಎಂದಾದರೆ ಅವರ ನೋಟವು ಹಸುರುಮಯವಾಗಿದೆ ಎಂದೇ ಸ್ವಾರಸ್ಯಪೂರ್ಣವಾಗಿ ಹೇಳಬಹುದು.

**3. "ಹಸುರು ಹಸುರಿಳೆಯುಸಿರೂ"**

**ಆಯ್ಕೆ:** ಈ ವಾಕ್ಯವನ್ನು **ಕುವೆಂಪು** ಅವರ **'ಪಕ್ಷಿಕಾಶಿ'** ಕವನ ಸಂಕಲನದಿಂದ ಆಯ್ದ **'ಹಸುರು'** ಎಂಬ ಪದ್ಯದಿಂದ ಆರಿಸಲಾಗಿದೆ.

**ಸಂದರ್ಭ:** ಹೊಸ ಹೂವಿನ ಕಂಪು (ಸುವಾಸನೆ) ಹಸುರಾಗಿದೆ. ಬೀಸುವ ಗಾಳಿಯ ತಂಪು ಹಸುರಾಗಿದೆ. ಹಕ್ಕಿಯ ಕೊರಳಿನ ಧ್ವನಿ ಹಸುರಾಗಿದೆ. ಹಸುರಾಗಿರುವ ಭೂಮಿಯ ಉಸಿರೋ ಹಸಿರಾಗಿದೆ ಎಂದು ಕವಿ ಪ್ರಕೃತಿಯನ್ನು ವರ್ಣಿಸುವ ಸಂದರ್ಭವಾಗಿದೆ.

**ಸ್ವಾರಸ್ಯ:** ಹಸುರು ಭೂಮಿಯ ಉಸಿರು ಆದ್ದರಿಂದ ಸಕಲ ಭೂಜೀವಿಗಳಿಗೂ ಹಸುರು ಬಹುಮುಖ್ಯವಾದದು. ಅದು ಸರ್ವಜೀವಿಗಳ ಇಂದ್ರಿಯಗಳನ್ನೂ ವ್ಯಾಪಿಸಿದೆ ಎಂದು ವರ್ಣಿಸಲಾಗಿದೆ.

**4. "ಹಸುರತ್ತಲ್, ಹಸುರಿತ್ತಲ್, ಹಸುರೆತ್ತಲ್"**

**ಆಯ್ಕೆ:** ಈ ವಾಕ್ಯವನ್ನು **ಕುವೆಂಪು** ಅವರ **'ಪಕ್ಷಿಕಾಶಿ'** ಕವನ ಸಂಕಲನದಿಂದ ಆಯ್ದ **'ಹಸುರು'** ಎಂಬ ಪದ್ಯದಿಂದ ಆರಿಸಲಾಗಿದೆ.

**ಸಂದರ್ಭ:** ಆ ಕಡೆ ನೋಡಿದರೂ ಹಸುರು ಈ ಕಡೆ ನೋಡಿದರೂ ಹಸುರು ಎತ್ತೆತ್ತಲೂ ನೋಡಿದರೂ ಹಸುರು, ಕಡಲೂ ಹಸುರಾಗಿದೆ. ಕವಿಯ ಆತ್ಮವೂ ಹಸುರುಗಟ್ಟಿಬಿಟ್ಟಿದೆ. ಒಡಲೊಳಗಿನ ರಕ್ತವೂ ಹಸುರಾಗಿದೆ! ಎಂದು ಪ್ರಕೃತಿ ಸೌಂದರ್ಯವನ್ನು ಆಸ್ವಾದಿಸಿ ವರ್ಣಿಸಿದ ಸಂದರ್ಭವಾಗಿದೆ.

**ಸ್ವಾರಸ್ಯ :** ಭೂಮಿಯ ಎತ್ತೆತ್ತ ನೋಡಿದರೂ ಹಸುರು. ಇದನ್ನು ನೋಡಿದ ಕವಿಯ ನೆತ್ತರು, ಆತ್ಮವೂ ಹಸುರುಗಟ್ಟಿ, ಪ್ರಕೃತಿ ಮತ್ತು ಕವಿಯ ಆತ್ಮದ ನಡುವೆ ಅದ್ವೈತ ಪ್ರತಿಪಾದಿತವಾಗಿದೆ.

**ಭಾಷಾ ಚಟುವಟಿಕೆ**

5. **ಕೊಟ್ಟಿರುವ ಪದ್ಯಭಾಗವನ್ನು ಪೂರ್ಣಗೊಳಿಸಿ, ಕಂಠಪಾಠ ಮಾಡಿರಿ**

**ಹಸುರಾಗಸ;** ಹಸುರು ಮುಗಿಲು
ಹಸುರು ಗದ್ದೆಯಾ ಬಯಲು
ಹಸುರಿನ ಮಲೆ; ಹಸುರು ಕಣಿವೆ
ಹಸುರು ಸಂಜೆಯೀ **ಬಿಸಿಲೂ!**

**ಹೊಸ** ಹೂವಿನ ಕಂಪು ಹಸುರು
ಎಲರಿನ ತಂಪೂ ಹಸುರು!
ಹಕ್ಕಿಯಕೊರಲಿಂಪು ಹಸುರು!
ಹಸುರು **ಹಸುರಿಳೆಯುಸಿರೂ!**